ಅ) ರೂ 100.00 ಲಕ್ಷ

ಸುಮಾರು ರೂ. 320.00 ಲಕ್ಷ

ಆ) ಇನ್ನೂ ಬಿಡುಗಡೆಯಾಗಿರುವುದಿಲ್ಲ.

ಇ) ಈ ಕಾರ್ಖಾನೆಗೆ ಇನ್ನೂ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾಗಿರುವುದಿಲ್ಲ. ಯೋಜನಾ ವೆಚ್ಚ4200ಲಕ್ಷ ರೂ. ಅಂದಾಜು ಮಾಡಿದ್ದು ಅದನ್ನು ಭರಿಸುವ ವಿಧಾನ ಈ ಕೆಳಕಂಡಂತೆ ಇದೆ.

1.	ಸದಸ್ಯರ ಶೇರು ಬಂಡವಾಳ ಯೋಜನಾವೆಚ್ಚ	ಶೇ. 10
2.	ಸರ್ಕಾರದಿಂದ ಪಾಲು ಬಂಡವಾಳ	ಶೇ. 30
3.	ಹಣಕಾಸು ಸಂಸ್ಥೆಗಳಿಂದ ಸಾಲ	ಶೇ. 60

ಮೇಲ್ಕಂಡ ಪ್ರಕಾರ ಸುಮಾರು2500ಲಕ್ಷ ರೂ. ಸಾಲವನ್ನು ಉನ್ನತ ಹಣಕಾಸು ಸಂಸ್ಥೆಗಳಿಂದ ಮಂಜೂರು ಆಗಬೇಕಾಗಿರುತ್ತದೆ. ಈ ಸಾಲ ಪಡೆಯಲು ಪ್ರಯತ್ನ ನಡೆಯುತ್ತಿದ್ದು ಕಾರ್ಖಾನೆಯ ನಿರ್ಮಾಣ ಕಾರ್ಯ ಮುಗಿಯುವುದು ಸಾಲ ಮಂಜೂರಾತಿಯನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಹೊಸ ಕಾರ್ಖಾನೆಯನ್ನು ನಿರ್ಮಾಣ ಮಾಡಲು ಸುಮಾರು 20 ತಿಂಗಳು ಅಗತ್ಯವಿರುತ್ತದೆ. ಈ ಕಾರ್ಖಾನೆಯ ನಿರ್ಮಾಣಕ್ಕೆ ಬೇಕಾದ ನಿವೇಶನ ಪಡೆಯುವ ಕ್ರಮ ಮುಗಿದಿದೆ.

ಆರಾಧನ ಯೋಜನೆಯಲ್ಲಿ ಧಾರವಾಡ ಜಿಲ್ಲೆಗೆ ಬಿಡುಗಡೆಯಾದ ಹಣ

570 - ಶ್ರೀ ಯು.ಬಿ. ಬಣಕಾರ್ (ಹಿರೇಕೇರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನಾ ಯೋಜನೆಯಡಿಯಲ್ಲಿ ಧಾರವಾಡ ಜಿಲ್ಲೆಗೆ 1994-95, 1995-96ನೇ ಸಾಲಿಗೆ ತಾಲ್ಲೂಕುವಾರು ನಿಗಧಿ ಮಾಡಿದ ಗುರಿ ಎಷ್ಟು, ಬಿಡುಗಡೆಯಾದ ಹಣವೆಷ್ಟು, ಖರ್ಚಾದ ಹಣವೆಷ್ಟು.

ಆ) ಧಾರವಾಡ ಜಿಲ್ಲೆಯ ಜಿಲ್ಲಾ ಸಮಿತಿ ಮಾಡಲಾಗಿದೆಯೇ, ಹಾಗಿಲ್ಲದಿದ್ದಲ್ಲಿ ಎಂದು ಮಾಡಲಾಗುವುದು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಧಾರವಾಡ ಜಿಲ್ಲೆಗೆ 1994-95ನೇ ಸಾಲಿನಲ್ಲಿ ಬಿಡುಗಡೆಯಾದ ಹಣ ರೂ. 46,78,216.00 1995-96ನೇ ಸಾಲಿನಲ್ಲಿ ಇನ್ನು ಹಣ ಬಿಡುಗಡೆಯಾಗಿಲ್ಲ ತಾಲ್ಲೂಕುವಾರು ಗುರಿ ನಿಗದಿಪಡಿಸಿಲ್ಲ.1994-95ರಲ್ಲಿ ಆರಾಧನಾ ಸಮಿತಿಗಳು ರದ್ದಾದುದರಿಂದ ಯಾವುದೇ ಕಾಮಗಾರಿಗಳನ್ನು ಕೈಗೊಂಡಿಲ್ಲ ಹಾಗೂ ಹಣ ಖರ್ಚಾಗಿರುವುದಿಲ್ಲ.

ಅ) ಆರಾಧನಾ ಯೋಜನೆಯ ಅನುಷ್ಠಾನಕ್ಕೆ ಜಿಲ್ಲಾ ಸಮಿತಿ ಮತ್ತು ತಾಲ್ಲೂಕು ಸಮಿತಿಗಳ ಬದಲಾಗಿ ವಿಧಾನ ಸಭಾ ಕ್ಷೇತ್ರವಾರು ಸಮಿತಿಗಳನ್ನು ರಚಿಸಲಾಗುತ್ತಿದೆ. ಈಗಾಗಲೇ 17 ವಿಧಾನ ಸಭಾ ಕ್ಷೇತ್ರಗಳಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಉಳಿದ ವಿಧಾನ ಸಭಾ ಕ್ಷೇತ್ರದ ಸಮಿತಿ ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ

571 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ ಎಷ್ಟು?

ಆ) ಅವುಗಳನ್ನು ಯಾವಾಗ ತುಂಬಲಾಗುವುದು

ಇ) ಗ್ರಾಮ ಲೆಕ್ಕಾಧಿಕಾರಿಗಳನ್ನು ನೇಮಕ ಮಾಡಿ ಎಷ್ಟು ವರ್ಷವಾಗಿದೆ (ಕೊನೆಯದಾಗಿ ನೇಮಕ ಮಾಡಿದ ವರ್ಷ)

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 1007.

ಆ) ಖಾಲಿ ಇರುವ ಹುದ್ದೆಗಳನ್ನು ತುಂಬುವ ವಿಚಾರವನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಇ) ಎರಡು ವರ್ಷಗಳಾಗಿವೆ. (1994 ರಲ್ಲಿ 863 ಸಕ್ರಮಗೊಂಡ ದಿನಗೂಲಿ ನೌಕರರನ್ನು ಮತ್ತು 1545 ಮಿತ ವೇತನ ಪದವೀಧರರನ್ನು ನೇಮಕ ಮಾಡಿದೆ)

ರಾಜ್ಯದಲ್ಲಿ ಆಧುನಿಕ ಕೃಷಿ ಪದ್ಧತಿಯನ್ನು ಆಳವಡಿಸುವುದು

574 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಷ್ಟು ಎಕರೆಗಳಲ್ಲಿ ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಲಾಗಿದೆ.

ಆ) ಆಧುನಿಕ ಕೃಷಿ ತಂತ್ರಜ್ಞಾನ ರೈತನಿಗೆ ತನ್ನ ಮನೆ ಬಾಗಿಲಿನಲ್ಲಿ ದೊರೆಯಲು ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳಾವುವು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸುವುದು ಒಂದು ಅವಿರತ ಕಾರ್ಯವಿಧಾನ ಈ ನೂತನ ಕೃಷಿ ಪದ್ಧತಿಗಳನ್ನು ರಾಜ್ಯದ ಕೃಷಿ ಯೋಗ್ಯ ಭೂಮಿಗೆ ಅಳವಡಿಸಲು ಪುನರ್‌ರಚಿತ ಕೃಷಿ ಪದ್ಧತಿಯ ಮೂಲಕ ಪ್ರಯತ್ನಿಸಲಾಗುತ್ತಿದೆ.